**2ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು**
**ಸಿ.ಸಿ.ನಂ.2075/2018**

ಸಾಕ್ಷಿಯ ಹೆಸರು :- ದಕ್ಷಿಣಮೂರ್ತಿ
ತಂದೆ/ಗಂಡನ ಹೆಸರು :- ಮೇಲೆಗೌಡ
ವಯಸ್ಸು :- 58 ವರ್ಷ
ಉದ್ಯೋಗ :- ಕೃಷಿ ಅಧಿಕಾರಿಗಳು
ವಾಸಸ್ಥಳ :- ಮಹಾರ್ನವಮಿ ದೊಡ್ಡಿ ಗ್ರಾಮ
(ಸಾಕ್ಷಿಗೆ ದಿನಾಂಕ: **16.08.2022** ರಂದು ಪ್ರಮಾಣ ವಚನ ಬೋಧಿಸಲಾಯಿತು)

ಸಿಡಬ್ಲ್ಯೂ.1 ಪಿಡಬ್ಲ್ಯೂ.1

ಮುಖ್ಯ ವಿಚಾರಣೆಃ ಶ್ರೀ ಸ ಸ ಅ ವಕೀಲರಿಂದ .

ನಾನು 2012-13 ರಿಂದ 2020-21 ರವರೆಗೆ ಮದ್ದೂರು ತಾಲ್ಲೂಕು ಕೊಪ್ಪ ರೈತ ಸಂಪರ್ಕ ಕೇಂದ್ರದಲ್ಲಿ ಸಹಾಯಕ ಕೃಷಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಮಂಡ್ಯ ಜಿಲ್ಲಾಧಿಕಾರಿಗಳು ಹಾಗೂ ಚುನಾವಣಾಧಿಕಾರಿಗಳು ನನ್ನನ್ನು ಮದ್ದೂರು ತಾಲ್ಲೂಕು, ಕಸಬಾ ಹೋಬಳಿಗೆ ಫ್ಲೇಯಿಂಗ್ ಸ್ಕೊಡ್ ಆಗಿ ನೇಮಕ ಮಾಡಿ ಆದೇಶ ಮಾಡಿರುತ್ತಾರೆ. 2014 ರ ವಿಧಾನಸಭಾ ಕ್ಷೇತ್ರ ಚುನಾವಣೆಯ ಪ್ರಯುಕ್ತ ನಾನು ಮತ್ತು ನನ್ನ ತಂಡರವರಾದ ಚಾಸಾ-4, ವಾಹನ ಚಾಲಕನಾದ ಚಾಸಾ-3, ವಿಡಿಯೋಗ್ರಾಫರ್ ಚಾಸಾ-2 ರವರ ಜೊತೆ ವಾಹನ ಸಂಖ್ಯೆಃಕೆಎ-11-ಎಂ-4574 ರಲ್ಲಿ, ದಿಃ09.05.2018 ರಂದು ಗಸ್ತು ತಿರುಗುತ್ತಿದ್ದಾಗ, ಸುಮಾರು ಸಂಜೆ 04-30 ಗಂಟೆ ಸಮಯದಲ್ಲಿ ಮದ್ದೂರು ತಾಲ್ಲೂಕು, ಕಸಬಾ ಹೋಬಳಿ ಚಾಪುರದೊಡ್ಡಿ ಗ್ರಾಮದ ಮಾರ್ಗವಾಗಿ ಗಸ್ತು ತಿರುಗುತ್ತಿದ್ದಾಗ, ಆ ಸಮಯದಲ್ಲಿ ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಒಬ್ಬ ಅಸಾಮಿ ಮದ್ದೂರು ಪೇಟೆ ಬೀದಿಯ, ಸಂಜಯ್ ಚಲನಚಿತ್ರ ಮಂದಿರದ ಮುಂಭಾಗ ಶ್ರೀ ಮಲೆ ಮಹದೇಶ್ವರ ಸೈಕಲ್ ಮಾರ್ಟ್ ಮುಂಭಾಗದಲ್ಲಿ, ಒಂದು ಹಿರೋ ಹೋಂಡಾ ಪ್ಯಾಶನ್ ಪ್ಲೋ ಬೈಕಿನ ಮೇಲೆ ಕುಳಿತು ಹಣವನ್ನು ಚುನಾವಣಾ ಸಂಬಂಧವಾಗಿ ಸಾಗಾಟ ಮಾಡುತ್ತಿರುತ್ತಾನೆಂದು ಹಾಗೂ ಬೈಕಿನ ಮುಂಭಾಗ ಜಾತ್ಯತೀತ ಜನತಾದಳದ ಬಾವುಟವನ್ನು ಕಟ್ಟಿಕೊಂಡು ಕುಳಿತಿರುತ್ತಾನೆಂದು ಮಾಹಿತಿ ನೀಡಿರುತ್ತಾರೆ. ಅದರಂತೆ ನಾವು ಮತ್ತು ನಮ್ಮ ತಂಡದವರು ಸಂಜೆ 04-55 ರಿಂದ 05-00 ಗಂಟೆ ಸಮಯದಲ್ಲಿ ಬಾತ್ಮೀದಾರರು ನೀಡಿದ ಮಾಹಿತಿಯ ಸ್ಥಳಕ್ಕೆ ಬಂದು ನೋಡಿರುತ್ತೇವೆ. ಒಬ್ಬ ಅಸಾಮಿ ಹಿರೋ ಫ್ಯಾಶನ್ ಪ್ಲೋ ಬೈಕ್ ನ ಮೇಲೆ ಕುಳಿತು, ಕೈಯಲ್ಲಿ ಹಳದಿ ಚೀಲದಲ್ಲಿ ದುಡ್ಡನ್ನು ಇಟ್ಟುಕೊಟ್ಟಿರುವುದು ಕಂಡು ಬಂದಿರುತ್ತದೆ. ಬೈಕ್ ನಂಃ ಕೆಎ-11-ಇಬಿ-2298 ಹಿರೋ ಹೋಂಡಾ ಫ್ಯಾಶನ್ ಪ್ಲೋ ಬೈಕಿನ ಮುಂಭಾಗದಲ್ಲಿ ಜಾತ್ಯತೀತ ಜನತಾದಳದ ಬಾವುಟವನ್ನು ಕಟ್ಟಿಕೊಂಡು

ಕುಳಿತಿರುವುದು ಕಂಡುಬಂದಿರುತ್ತದೆ. ಸ್ಥಳಕ್ಕೆ ಹೋಗಿ ಸದರಿ ಅಸಾಮಿಯನ್ನು ಕೇಳಲಾಗಿ ರೂ2,80,000/- ಹಣಗಳಿಗೆ ಸರಿಯಾದ ದಾಖಲಾತಿಯನ್ನು ಹಾಗೂ ವಿವರಣೆ ಸರಿಯಾಗಿ ನೀಡದೇ ಇರುವುದರಿಂದ ಮಹಜರ್ ಮೂಲಕ ವಿವಿಧ ಮೌಲ್ಯದ ರೂ.2,80,000/- ಹಣವನ್ನು ವಶಕ್ಕೆ ಪಡೆದು ಹಾಗೂ ಹಿರೋ ಫ್ಯಾಶನ್ ಪ್ರೋ ಬೈಕ್ ಮತ್ತು ಬಾವುಟವನ್ನು ವಶಕ್ಕೆ ಪಡೆದು ಸಂಬಂಧಿಸಿದ ಸದರಿ ರೂ.2,80,000/- ಹಣವನ್ನು ಸಹಾಯಕ ನಿರ್ದೇಶಕರು ಉಪಖಜಾನೆ, ಮದ್ದೂರು ರವರಿಗೆ ಒಪ್ಪಿಸಿ, ಸ್ವೀಕೃತಿಯನ್ನು ಪಡೆದಿರುತ್ತೇನೆ. ನಂತರ ಅಸಾಮಿಯನ್ನು ಮತ್ತು ಹಿರೋ ಫ್ಯಾಶನ್ ಪ್ರೋ ಬೈಕ್ ನ್ನು ಮತ್ತು ಬಾವುಟದ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಹಸಿರು ಚಿಹ್ನೆ ಮಧ್ಯದಲ್ಲಿ ಬಿಳಿ ಬಣ್ಣವಿದ್ದು, ಹೊರೆಹೊತ್ತ ಮಹಿಳೆಯ ಚಿಹ್ನೆ ಇರುವ ಬಾವುಟವನ್ನು ಚಾಸಾ-10 ರವರಿಗೆ ಒಪ್ಪಿಸಿ, ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ನೀಡಲಾಯಿತು. ಸಾಕ್ಷಿಯು 3 ಮಹಜರ್ ಗಳಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ರಿಂದ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ:09.05.2018 ರಲ್ಲಿರುವ ಪತ್ರದಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಉಪಖಜಾನೆಯವರು ನೀಡಿದ ಹಿಂಬರಹದಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆಯಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮೇಲೆ ಹೇಳಿದ ಜಾತ್ಯತೀತ ಜನತಾದಳದ ಬಾವುಟವನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಒ**

**(ಕಿರಣ್ ಎಸ್ ಪಿ)**
**2ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮದ್ದೂರು.**